# ಚರಿತ್ರೆಯ ಚರಿತ್ರೆ

ಸಾಮಾನ್ಯವಾಗಿ ಒಂದು ದೇಶದ ಚರಿತ್ರೆ ಎಂದರೆ ಅಲ್ಲಿನ ರಾಜಕೀಯ ಚಟುವಟಿಕೆಗಳ ಕಾಲಾನುಕ್ರಮ ದಾಖಲೆ ಎಂದೇ ಭಾವಿಸಲಾಗುತ್ತದೆ. ಆದರೆ 'ಚರಿತ್ರೆ' ಎಂಬುದರ ಅರ್ಥವ್ಯಾಪ್ತಿ ಅಷ್ಟಕ್ಕೇ ಸೀಮಿತವಾಗುವುದಿಲ್ಲ. ಚರಿತ್ರೆ, ಚರಿತೆ, ಚಾರಿತ್ರ್ಯ ಮುಂತಾದ ಪದಗಳ 'ಚರ' ಎಂಬ ಧಾತುವಿನಿಂದ ಹುಟ್ಟಿಕೊಂಡಿರುವಂಥವು, 'ಚರ' ಎಂದರೆ 'ಚಲಿಸು' ಎಂದರ್ಥವಷ್ಟೆ? ಹೀಗಾಗಿ ಮನುಷ್ಯಕುಲ ವಿವಿಧ ಕಾಲಘಟ್ಟಗಳಲ್ಲಿ ನಡೆಸಿದ ಚಲನೆಯ ಕಥೆಯೇ ಚರಿತ್ರೆ ಎನ್ನಬಹುದು. ಬೇರೆ ಮಾತುಗಳಲ್ಲಿ ಹೇಳುವುದಾದರೆ ಮನುಷ್ಯನ ನಡವಳಿಕೆ ಹಾಗೂ ಅದರ ಪರಿಣಾಮಗಳ ವೃತ್ತಾಂತವೇ ಚರಿತ್ರೆ. ಒಂದು ದೇಶವನ್ನು ಆಳಿದವರ ಆಡಳಿತ ವೈಖರಿ, ಅವರು ನಡೆಸಿದ ಯುದ್ಧಗಳು, ಅವುಗಳಲ್ಲಾದ ಸೋಲು ಗೆಲುವುಗಳು– ಇವೆಲ್ಲವೂ ಚರಿತ್ರೆಯ ತೆಕ್ಕೆಯಲ್ಲಿ ಬರುವ ಸಂಗತಿಗಳಾದರೂ, ಅವುಗಳಷ್ಟನ್ನೇ ದಾಖಲಿಸುವುದು ಚರಿತ್ರೆಯ ಕೆಲಸವಲ್ಲ. ಖ್ಯಾತ ಚರಿತ್ರಕಾರ ಗಿಬ್ಬನ್ **'History is little more than the register of the crimes, follies and misfortunes of man kind'** ಎಂದು ಹೇಳಿರುವುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಮೊದಮೊದಲು ಅವರಿವರು ಹೇಳಿದ ಅಂತೆಕಂತೆಗಳನ್ನೋ, ಕೆಲ ವದಂತಿಗಳನ್ನೋ ಕಲೆಹಾಕಿ, ಅದನ್ನೇ 'ಚರಿತ್ರೆ' ಎಂದು ಕರೆದಿರಬೇಕು, ಗ್ರೀಸ್ ದೇಶದ ಹೆರೊಡೋಟಸ್ ತಾನು ಇತರರಿಂದ ಕೇಳಿದ ಸಂಗತಿಗಳನ್ನು ಬರೆಹ ರೂಪದಲ್ಲಿ ದಾಖಲಿಸುವ ಕೆಲಸ ಮಾಡಿದ. ಅದನ್ನೇ ಚರಿತ್ರೆಯ ರಚನೆಯ ಮೊದಲ ಪ್ರಯತ್ನವೆನ್ನಬಹುದು. ನಮ್ಮ ರಾಮಾಯಣ, ಮಹಾಭಾರತಗಳನ್ನೂ ಇತಿಹಾಸಗಳೆಂದೇ ಕರೆಯುತ್ತಾರೆ. ಹೆರೊಡೋಟಸ್‌ನ ವೃತ್ತಾಂತಗಳಲ್ಲಿ ಹಾಗೂ ರಾಮಾಯಣ ಮಹಾಭಾರತಗಳಲ್ಲಿ ಚರಿತ್ರೆಗೆ ಅರ್ಹವೆನ್ನಿಸುವ ವಾಸ್ತವ ಸಂಗತಿಗಳು ಇರಬಹುದಾದರೂ– ಅವುಗಳನ್ನೂ ಮೀರಿ, ಕಾಲ್ಪನಿಕ, ಅವಾಸ್ತವ ಸಂಗತಿಗಳು ಹೇರಳವಾಗಿವೆ ಎನ್ನಬಹುದು. ಹೀಗಾಗಿ ಅವುಗಳಲ್ಲಿ ಶುದ್ಧ ಚರಿತ್ರೆಯ ಅಂಶಗಳು ವಿರಳ. ಇಂಗ್ಲೆಂಡಿನ ಎಡ್ವರ್ಡ್ ಗಿಬ್ಬನ್ ರಚಿಸಿದ ರೋಮ್ ದೇಶದ ಚರಿತ್ರೆಯೇ ನಿಜವಾದ ಅರ್ಥದಲ್ಲಿ ಮೊದಲ ಚರಿತ್ರೆ ಎನ್ನುತ್ತಾರೆ ವಿದ್ವಾಂಸರು.

ಮನುಷ್ಯ ಆದಿಮ ಹಂತದಿಂದ ಆಧುನಿಕ ಹಂತಕ್ಕೆ ನಡೆದು ಬಂದ ದಾರಿಯಲ್ಲಿ ಆತ ಎದುರಿಸಿದ ಸವಾಲುಗಳು, ಸೋಲು ಗೆಲುವುಗಳು, ಸಮಾಜದಲ್ಲಿನ ಏರಿಳಿತಗಳು ಇತ್ಯಾದಿಗಳೆಲ್ಲವನ್ನೂ ಯಾವುದೇ ಉತ್ಪ್ರೇಕ್ಷೆ ಅಥವಾ ಪೂರ್ವಗ್ರಹಗಳಿಲ್ಲದೆ ನಿರ್ಮೋಹದಿಂದ ದಾಖಲಿಸುವುದೇ ನಿಜವಾದ ಚರಿತ್ರಕಾರನ ಉದ್ದೇಶವಾಗಿರಬೇಕು. ಒಂದು ದೇಶದ ರಾಜಕೀಯ ಸ್ಥಿತಿಗತಿಗಳ ಜೊತೆಗೆ, ಅಲ್ಲಿನ ಆರ್ಥಿಕ, ಸಾಂಸ್ಕೃತಿಕ ಸ್ಥಿತ್ಯಂತರಗಳು, ಅಲ್ಲಿನ ಜನರು ಅನುಸರಿಸುತ್ತಿದ್ದ ಧರ್ಮ, ನಂಬಿಕೆ ಆಚರಣೆಗಳು– ಇವೆಲ್ಲವುಗಳ ಸಮಗ್ರ ಚಿತ್ರಣವನ್ನು ಇತಿಹಾಸ ಅಥವಾ ಚರಿತ್ರೆ ಕೊಡುವಂತಿರಬೇಕು. ಹೀಗಾಗಿ ಆಧುನಿಕ ಚರಿತ್ರಕಾರರು ಒಂದು ದೇಶದ ರಾಜಕೀಯ ಸ್ಥಿತಿಗತಿಗಳನ್ನಲ್ಲದೆ; ಅಲ್ಲಿ ನಡೆದ ಸಾಮಾಜಿಕ, ಸಾಂಸ್ಕೃತಿಕ ಹಾಗೂ ವೈಜ್ಞಾನಿಕ ಚಟುವಟಿಕೆಗಳು, ಒಟ್ಟನಲ್ಲಿ ಅಲ್ಲಿನ ಸಾಮಾನ್ಯ ಜೀವನದ ಸಮಗ್ರ ಮುಖಗಳೆಲ್ಲವನ್ನೂ ಚರಿತ್ರೆಯ ಸಾಮಗ್ರಿಗಳೆಂದು ಪರಿಗಣಿಸುತ್ತಾರೆ. ತನ್ನ ವೈಯಕ್ತಿಕ ನಿಲವುಗಳು, ನಂಬಿಕೆಗಳು ಇತ್ಯಾದಿಗಳೆಲ್ಲವನ್ನೂ ಬದಿಗಿರಿಸಿ ಪ್ರಾಮಾಣಿಕವಾಗಿ ವಾಸ್ತವ ಸಂಗತಿಗಳನ್ನು ದಾಖಲಿಸುವುದಷ್ಟೇ ನಿಜವಾದ ಚರಿತ್ರಕಾರನ ಕರ್ತವ್ಯ. ತನ್ನ ಧರ್ಮಕ್ಕೆ ಸೇರಿದ್ದ ರಾಜರನ್ನೋ ಮುಖಂಡರನ್ನೋ ಎತ್ತರದಲ್ಲಿರಿಸಿ, ಅನ್ಯಧರ್ಮೀಯರಾದವರು ಮಾಡಿದ್ದ ಒಳ್ಳೆಯ ಕಾರ್ಯಗಳನ್ನು ಮರೆಮಾಚಿ ಚರಿತ್ರೆಯನ್ನು ಬರೆಯುವುದು ಶುದ್ಧ ಚರಿತ್ರಕಾರನ ಲಕ್ಷಣವಲ್ಲ.

ಅದೆಲ್ಲವೂ ಸರಿಯೆ. ಆದರೆ ಚರಿತ್ರೆಯಿಂದ, ಅದರ ವ್ಯಾಸಂಗದಿಂದ ನಮಗಾಗುವ ಪ್ರಯೋಜನವಾದರೂ ಏನು? ಚರಿತ್ರೆಯ ಓದಿನಿಂದ ನಮಗೆ ನಮ್ಮ ಪರಂಪರೆಯ ಅರಿವುಂಟಾಗುತ್ತದೆ, ಮಾತ್ರವಲ್ಲ. ನಮ್ಮ ಪೂರ್ವಜರು ನಡೆದು ಬಂದ ದಾರಿಯಲ್ಲಿ ತಮ್ಮ ಅಸ್ತಿತ್ವಕ್ಕಾಗಿ ನಡೆಸಿದ ಹೋರಾಟಗಳ ತಿಳಿವಳಿಕೆಯೂ ಲಭ್ಯವಾಗುತ್ತದೆ, ಚರಿತ್ರೆಯೆಂದರೆ ಮನುಷ್ಯನ ಬಾಳಿನ ಹೋರಾಟದ ಪತನ, ಅಭ್ಯುದಯಗಳ ಕಥೆ. ನಮ್ಮ ಹಿರಿಯರು ಎಲ್ಲೆಲ್ಲಿ ಸೋಲನ್ನು ಅನುಭವಿಸಿದರು, ಆ ಸೋಲುಗಳಿಗೆ ಕಾರಣಗಳೇನು– ಇತ್ಯಾದಿಗಳನ್ನು ತಿಳಿದುಕೊಳ್ಳುವುದರ ಮೂಲಕ ವರ್ತಮಾನದಲ್ಲಿ ಬದುಕಿರುವ ನಾವು ಅಂಥ ತಪ್ಪುಗಳನ್ನು ಮಾಡಬಾರದೆಂಬ ಎಚ್ಚರವುಂಟಾಗುತ್ತದೆ; ಹಿರಿಯರು ಎಟುಕಿಸಿಕೊಂಡ ಯಶಸ್ಸಿಗೆ, ಅವರ ಸಾಧನೆಗಳಿಗೆ ಕಾರಣಗಳನ್ನು ಅರಿತಾಗ ನಾವೂ ಆ ದಾರಿಯನ್ನೇ ಅನುಸರಿಸಬಹುದೆಂಬ ಮಾರ್ಗದರ್ಶನ ದೊರೆಯುತ್ತದೆ. ಗತಕಾಲದಲ್ಲಿ ಅರ್ಧಕ್ಕೆ ನಿಂತುಹೋಗಿರುವ ಮಹತ್ವದ ಕೆಲಸಗಳನ್ನು ನಾವು ಪೂರ್ಣಗೊಳಿಸಬೇಕೆಂಬ ಪ್ರೇರಣೆ ಇತಿಹಾಸದಿಂದ ದೊರೆಯುತ್ತದೆ.

ಆದರೆ ಚರಿತ್ರೆಯಿಂದ ಪಾಠ ಕಲಿಯಬೇಕೆಂಬ ವಿವೇಕ ಮಾತ್ರ ನಮಗೆ ಸಾಕಷ್ಟಿಲ್ಲವೆಂಬ ಅನುಮಾನವಂತೂ ಇದ್ದೇ ಇದೆ!

**■ ವೈನತೇಯ**

## ಮಾತೇ ಮುತ್ತು

★ ವ್ಯಕ್ತಿ ಯಾರನ್ನು ಪ್ರೀತಿಸುತ್ತಾನೆಯೋ ಅವನಿಂದ ಬಹಳ ಬೇಗ ಮೋಸ ಹೋಗುತ್ತಾನೆ!

–ಮಹಾಭಾರತ

★ ಧರ್ಮ, ಯಶಸ್ಸು, ನೀತಿ, ದಕ್ಷತೆ ಮತ್ತು ಮನೋಹರ ಮಾತು ಇತ್ಯಾದಿ ಗುಣರತ್ನಗಳನ್ನು ಸಂಗ್ರಹಿಸುವ ಮನುಷ್ಯ ದುಃಖಿ ಆಗಿರುವುದಿಲ್ಲ.

–ಮನುಸ್ಮೃತಿ

★ ಪ್ರತಿ ಹೊಸವರುಷ ಹೊಸತು ಆರಂಭಿಸಲೆಂದೇ ಇದೆ. ಕಳೆದ ವರ್ಷದ ಬಗ್ಗೆ ಚಿಂತೆ ಬೇಡ. ಮುಂದಿನ ವರ್ಷದ ಬಗ್ಗೆ ಚಿಂತಿಸುವುದು ವ್ಯರ್ಥ. ಈ ವರ್ಷದ ಯೋಜನೆ ನಿರ್ಧರಿಸು. ಜೀವನದಲ್ಲಿ ಶೀಘ್ರ ಪರಿವರ್ತನೆಯಾಗುವುದು.

–ದ.ರಾ.ಬೇಂದ್ರೆ

★ ನಡೆವುದೊಂದೇ ಭೂಮಿ! ಕುಡಿವುದೊಂದೇ ನೀರು! ಸುಡುವಗ್ನಿಯೊಂದೆ ಇರುತಿರಲು ಕುಲಗೋತ್ರ! ನಡುವೆ ಎತ್ತಣದು ಸರ್ವಜ್ಞ!!

–ಸರ್ವಜ್ಞ

★ ಭಗವಂತನನ್ನು ಗುರುತಿಸಲು ಪ್ರೀತಿ ತುಂಬಿದ ಹೃದಯ ಮತ್ತು ಅನುರಾಗ ತುಂಬಿದ ದೃಷ್ಟಿ ಅಗತ್ಯ.

–ವೀರೇಂದ್ರ ಹೆಗ್ಗಡೆ

★ ಶುದ್ಧ ಚಾರಿತ್ರ್ಯದ ಎದುರು ವಿದ್ಯೆಯ ಬೆಲೆ ಕಮ್ಮಿಯದು.

–ಪ್ರೇಮಚಂದ್

★ ಯಾರಾದರೂ ಕೃತಘ್ನನಾದರೆ ಅದು ಅವನ ದೋಷ. ಆದರೆ ನೀನು ಸಜ್ಜನಿಕೆ ತೋರದಿದ್ದರೆ ಅದು ನಿನ್ನ ದೋಷ.

–ಅ.ನ.ಕೃ.

★ ಹಣ ಇದ್ದವನಿಗೆ ಮಿತ್ರರು ಇರುತ್ತಾರೆ, ಬಂಧುಗಳು ಇರುತ್ತಾರೆ. ಹಣ ಇದ್ದವನೇ ದೊಡ್ಡಪ್ಪ ಅನ್ನಿಸುತ್ತಾನೆ. ಹಣದಿಂದಲೇ ಜೀವನ.

–ಚಾಣಕ್ಯ

★ ನೀನು ಎಷ್ಟೊಂದು ಮಾಡಬೇಕಾಗಿದೆ, ಆದರೆ ಎಷ್ಟು ಕಮ್ಮಿ ಮಾಡಿದ್ದೀಯೆ.

–ಗಳಗನಾಥ

★ ಸ್ವಾಮೀಜಿ ಇರಲಿ, ನಿರ್ದೇಶಕ ಇರಲಿ, ಸಂಪಾದಕ ಇರಲಿ, ಯಾರೇ ಆಗಲಿ– ತನ್ನ ಹಿತ (ಕೆರಿಯರ್) ಮಾತ್ರ ನೋಡಿಕೊಳ್ಳುವವನು 'ನಾಯಕ' ಎನಿಸಿಕೊಳ್ಳುವುದಿಲ್ಲ. ತಾನು ಪ್ರತಿನಿಧಿಸುವ ಸಮೂಹದ ಹಿತ ಕಾಯಲು ತನ್ನ ಸ್ವಾರ್ಥವನ್ನು ಬದಿಗಿಟ್ಟವನು 'ನಾಯಕ'ನಾಗುತ್ತಾನೆ.

–ಅನುಭವಾಮೃತ

★ ಸಜ್ಜನರ ಕೋಪ ನೀರಿನ ಮೇಲೆ ಗೆರೆ ಎಳೆದಂತೆ, ಕ್ಷಣದಲ್ಲಿ ಲುಪ್ತವಾಗುತ್ತದೆ.

–ರಾಮಕೃಷ್ಣ ಪರಮಹಂಸ

★ ಅಹಂಕಾರದ ಅರ್ಥ ಸಂಗ್ರಹಿಸುವುದು, ಸಂಚಯ ಮಾಡುವುದು– ಅದು ಸದಾ ಬೇರೆಯವರಿಂದ ಸ್ವೀಕರಿಸುತ್ತಲೇ ಇರುತ್ತದೆ.

–ರವೀಂದ್ರನಾಥ ಠಾಕೂರ್